ಜಿಲ್ಲಾಧಿಕಾರಿಗಳಿಂದ ಕುಡಿಯುವ ನೀರಿಗಾಗಿ, ಮೇವಿನ ಬಗ್ಗೆ ಹಾಗೂ ಬೀಜದ ಸಬ್ಸಿಡಿ ಬಗ್ಗೆ ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಬಂದಿದೆ.

ಹಾಸನ ಕ್ಷೇತ್ರದಲ್ಲಿ ಬರಗಾಲ ಪರಿಹಾರಕ್ಕೆ ಶಾಶ್ವತ ಪರಿಹಾರ ಯೋಜನೆ ನಿರೂಪಿಸುವುದು

640 (762) ಶ್ರೀ ಹನುಮೇಗೌಡ. ಕೆ. ಹೆಚ್ (ಹಾಸನ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬಾ ಹಟ್ಟಾಯ ಹಾಗೂ ಶಾಂತಿ ಗ್ರಾಮ ಹೋಬಳಿಗಳು ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದ್ದು, ಇದಕ್ಕಾಗಿ ಲಕ್ಷಾಂತರ ರೂ.ಗಳ ಖರ್ಚು ಮಾಡುತ್ತಿರುವುದು ನಿಜವಲ್ಲವೆ?

ಆ) ಆಗಾಗ ಬರಗಾಲಕ್ಕೆ ತುತ್ತಾಗುವ ಈ ಭಾಗದ ರೈತರನ್ನು ಕ್ಷಾಮದ ದವಡೆಯಿಂದ ಬಿಡುಗಡೆ ಮಾಡಲು ಸರ್ಕಾರವು ಏನಾದರೂ ಶಾಶ್ವತ ಯೋಜನೆಯನ್ನು ಹಾಕಿಕೊಂಡಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) ಹೌದು.

ಆ) ಜಲಸಂರಕ್ಷಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಮುಂಬರುವ ವರ್ಷಗಳಲ್ಲಿ ಬರಪರಿಸ್ಥಿತಿಯನ್ನು ನಿಭಾಯಿಸಲು ಕ್ರಮ ಕೈಗೊಳ್ಳಲಾಗುವುದು.

ಬ್ರಹ್ಮಾವರ ಕ್ಷೇತ್ರಕ್ಕೆ ಹೆಚ್ಚುವರಿ ತಹಸೀಲ್ದಾರ್‌ರ ನೇಮಕ

641 (293) ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ಹೆಚ್ಚುವರಿ ತಹಸೀಲ್ದಾರ್‌ರನ್ನು ನೇಮಿಸಲು ಉದ್ದೇಶಿಸಲಾಗಿದೆ?

ಆ) ಎಲ್ಲೆಲ್ಲಿ ಹೆಚ್ಚು ತಹಸೀಲ್ದಾರ್‌ರನ್ನು ಇದುವರೆವಿಗೆ ನೇಮಕ ಮಾಡಲಾಗಿದೆ?

ಇ) ಬ್ರಹ್ಮಾವರ ಕ್ಷೇತ್ರಕ್ಕೆ ಹೆಚ್ಚುವರಿ ತಹಸೀಲ್ದಾರರ ನೇಮಕಾತಿ ಯಾವಾಗ ಮಾಡಲಾಗುವುದು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವಶ್ಯಕತೆಯ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲಿಸಿರುತ್ತವೆ ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸುವ ದೃಷ್ಟಿಯಿಂದ ಈ ಹಿಂದಿನ ಸಮಿತಿಗಳು ಶಿಫಾರಸ್ಸು ಮಾಡಿರುವಂತಹ ಸ್ಥಳಗಳಲ್ಲಿ ವಿಶೇಷ ತಹಸೀಲ್ದಾರ್‌ರನ್ನು ನೇಮಿಸಲಾಗುತ್ತಿದೆ.

ಆ) 1) ಮೂಡಬಿದರೆ (ದಕ್ಷಿಣ ಕನ್ನಡ ಜಿಲ್ಲೆ)
2) ಬೈಂದೂರು (ಉಡುಪಿ ಜಿಲ್ಲೆ)
3) ಕುರುಗೋಡು (ಬಳ್ಳಾರಿ ಜಿಲ್ಲೆ)
4) ಚಟಗುಪ್ಪ (ಬೀದರ್ ಜಿಲ್ಲೆ)
5) ಲಕ್ಷ್ಮೇಶ್ವರ (ಗದಗ ಜಿಲ್ಲೆ)
6) ನಿಡಗುಂದಿ (ಬಿಜಾಪುರ ಜಿಲ್ಲೆ)
7) ಬಬಲೇಶ್ವರ (ಬಿಜಾಪುರ ಜಿಲ್ಲೆ)